## 13 ಏಪ್ರಿಲ್, ಮುಂಜಾನೆ 8 ಗಂಟೆ

ಲಾಸ್ ಎಂಜಲೀಸ್

ಬೆಳ್ಳಂ ಬೆಳಿಗ್ಗೆ ಇದೇನಪ್ಪಾ ಇಷ್ಟು ಜೋರಾಗಿ ಮಾತಾಡ್ತಾ ಇದ್ದಾರಿವರು, ನೆಮ್ಮದಿಯಾಗಿ ನಿದ್ರೆ ಮಾಡಲೂ ಬಿಡುತ್ತಿಲ್ಲವಲ್ಲ ಎಂದು ಗೊಣಗುತ್ತಲೇ ಕೆವಿನ್ ಕಾಟನಿಂದಿಳಿದು ಹಾಲ್ ಕಡೆ ಹೋದ. ರೂಮ್‌ಮೇಟ್ಸ್ ಜೈ ಮತ್ತು ಅಮರ್ ಕಾಫಿ ಕುಡಿಯುತ್ತ ಜೋರು ಜೋರಾದ ಸಂಭಾಷಣೆಯಲ್ಲಿ ತೊಡಗಿದ್ದರು.

ಏನು ಇಷ್ಟು ಜೋರು? ಎಂದು ಆಕ್ಷೇಪಿಸಿದ ಕೆವಿನ್.

ವಿಷಯ ತಿಳಿದರೆ ನೀನೂ ಹೌಹಾರುತ್ತೀ ಎಂದು ಆರಂಭಿಸಿದ ಅಮರ್ ಜೈ ಮತ್ತು ನಾನು ಇವೊತ್ತು ರಾತ್ರಿ ಒಂದೇ ತರಹದ ಕನಸು ಕಂಡೆವು. ನನಗೆ ಬಿದ್ದ ಕನಸೇ ಅವನಿಗೂ ಬಿದ್ದಿತ್ತಂತೆ. ಏನೇನೂ ವ್ಯತ್ಯಾಸವಿಲ್ಲ. ನೆರಳಿನಾಕೃತಿಗೆ ಎಷ್ಟೊಂದು ಬಾಹುಗಳು! ಆ ನೆರಳಿನಾಕೃತಿಯ ಮುಖ ಕಾಣುತ್ತಿರಲಿಲ್ಲ. ಆದರೂ ಸ್ಪಷ್ಟ ಮಾತುಗಳು ಈ ವಿಶ್ವ ಅನ್ನೋದು ಒಂದು ಭ್ರಮೆ, ಭ್ರಾಂತಿ, ಕಣ್ಕಟ್ಟು, ಸ್ವಪ್ನ ಸೃಷ್ಟಿ... ಮತ್ತು..

ಅವನ ಮಾತು ಮುಗಿಯುವ ಮುನ್ನವೇ ಮಧ್ಯೆ ಬಾಯಿ ಹಾಕಿದ ಕೆವಿನ್ ಸಂಖ್ಯಾಶಾಸ್ತ್ರದ ಸಂಭವನೀಯತಾ ನಿಯಮದ ಪ್ರಕಾರ ಇದು ಅಸಾಧ್ಯ. ಒಂದೇ ಕನಸನ್ನು ಮೂವರು ನೋಡಲು ಹೇಗೆ ಸಾಧ್ಯ? ಸಾಧ್ಯವೇ ಇಲ್ಲ ಎಂದುಬಿಟ್ಟ.

ಜೈ ಮತ್ತು ಅಮರ್ ಪರಸ್ಪರ ಮುಖ ನೋಡಿಕೊಂಡರು. ಇವನಿಗೂ ಅದೇ ಕನಸು ಬಿದ್ದಿತ್ತೇ?

ಕೆವಿನ್ ಮಾತು ಮುಂದುವರಿಸಿದ  ನಿಮಗೆ ಗೊತ್ತು, ನಿನ್ನೆ ರಾತ್ರಿ ನಾನು ತಡವಾಗಿ ಬಂದಿದ್ದು. ಆಗ ನೀವು ಇಬ್ಬರೂ ಮಲಗಿಬಿಟ್ಟಿದ್ದಿರಿ. ಯಾವ ವಿಷಯವನ್ನೂ ನಾವು ಮಾತಾಡಿಯೇ ಇಲ್ಲ. ಎಂದಮೇಲೆ ನನಗೂ ಅದೇ ಕನಸು ಹೇಗೆ ಬೀಳುತ್ತದೆ? ನನ್ನ ಕನಸಲ್ಲೂ ಆ ನೆರಳಿನಾಕೃತಿ ಕಾಣಿಸಿತ್ತು. ನಿಮಗೆ ಹೇಳಿದ ಹಾಗೇ ನನಗೂ ಹೇಳಿತು ಈ ವಿಶ್ವ ಅನ್ನೋದು ಒಂದು ಭ್ರಮೆ, ಭ್ರಾಂತಿ, ಕಣ್ಕಟ್ಟು, ಸ್ವಪ್ನಸೃಷ್ಟಿ... ಮತ್ತು... ನಮ್ಮ ಮಿದುಳು ಹೇಗೆ ಅರ್ಥೈಸುತ್ತದೋ ಹಾಗೇ ನಂಬುತ್ತೇವೆ, ತಿಳಿದುಕೊಳ್ತೇವೆ.

ಮತ್ತೊಮ್ಮೆ ಜೈ ಮತ್ತು ಅಮರ್ ಪರಸ್ಪರ ಮುಖ ನೋಡಿಕೊಂಡರು. ಕೆವಿನ್ ಹೇಳಿದ್ದು ಅಕ್ಷರಶಃ ಸರಿ.

ಜೈ ನಾನಿನ್ನೂ ಹೇಳುವುದಿದೆ ಎಂದ. ಹೇಳು ಎನ್ನುವಂತೆ ಕೆವಿನ್ ಮತ್ತು ಅಮರ್ ಅವನ ಕಡೆ ನೋಡಿದರು. ಫೇಸ್ ಬುಕ್ ತೆಗೆದು ನೋಡಿದರೆ ದಂಗಾಗಿ ಬಿಡ್ತೇವೆ. ನಮ್ಮ ಅನೇಕ ಗೆಳೆಯರು ಕೂಡ ಇದೇ ಕನಸನ್ನು ಕಂಡು ತಮಗ ನಿಸಿದ್ದನ್ನು ಹೇಳಿಕೊಂಡಿದ್ದಾರೆ. ಕಮೆಂಟುಗಳ ಪ್ರವಾಹವೇ ಹರಿದುಬರುತ್ತಿದೆ...

ಕೆವಿನ್ ಮುಖದಲ್ಲಿ ಗಾಬರಿಯ ಚಿಹ್ನೆಗಳು ಕಾಣತೊಡಗಿದವು. ನಂಬಲಿಕ್ಕಾಗದು, ಬಿಡಲಿಕ್ಕಾಗದು. ಈಗಿನ್ನೂ ಮುಂಜಾನೆ 8 ಗಂಟೆ. ಈಗಾಗಲೇ ಎದ್ದು ಗೆಳೆಯರೆಲ್ಲ ತಮ್ಮ ತಮ್ಮ ಕನಸುಗಳ ಬಗ್ಗೆ ಹೇಳಿಕೊಳ್ಳುತ್ತಿದ್ದಾರೆಯೇ? ತೋಡಿಕೊಳ್ಳುತ್ತಿದ್ದಾರೆಯೇ?

ಇಲ್ನೋಡಿ ಎನ್ನುತ್ತ ಜೈ ತನ್ನ ಮೊಬೈಲ್ ಮುಂದೆ ಹಿಡಿದ. ಇವರು ಬೋಸ್ಟನ್ನಿನವರು, ಇವರು ಪೂರ್ವ ಕರಾವಳಿಯವರು. ಎಲ್ಲರಿಗೂ ಅದೇ ಕನಸು. ಅದೇ ನೆರಳಿನಾಕೃತಿ ಬಂದು ವಿಶ್ವ ಅನ್ನೋದು ಬರೀ ಭ್ರಮೆ ಅಂತ ಹೇಳಿದೆ ಅಂತ ವಿವರಿಸುತ್ತ ಹೋದ.

ಚೀನಾ ಮತ್ತು ಜಪಾನಿನವರದೇನು ಸಮಾಚಾರ? ಕೆವಿನ್ ಕೇಳಿದ.

ಗೂಗಲ್ ನ್ಯೂಜ್ ಪ್ರಕಾರ ಯುರೋಪ್ ಏಷಿಯಾಗಳಲ್ಲಿ ಈ ಕನಸು ಕಂಡ ಬಗ್ಗೆ ವರದಿಯಾಗಿಲ್ಲ.

ಬೀಪ್ ಬೀಪ್! ಅಮರ್‌ನ ಮೊಬೈಲ್ ಧ್ವನಿ ಹೊರಡಿಸಿತು. ಓದಿ ನೋಡಿ ಹೇಳಿದ  ಲಾಸ್ ಎಂಜಲೀಸ್ ಟೈಮ್ಸ್ ಪ್ರಕಾರ ಅಮೆರಿಕದಲ್ಲಿ ಸಾವಿರಾರು ಜನರು ಈ ಕನಸು ಕಂಡಿದ್ದಾರಂತೆ! ಮೂವರ ಹುಬ್ಬುಗಳೂ ಮೇಲೇರಿದವು!

***

**14 ಏಪ್ರಿಲ್, ಮುಂಜಾನೆ 10 ಗಂಟೆ**

ನರವಿಜ್ಞಾನ ಸಂಶೋಧನಾ ಕೇಂದ್ರ,  ಬೆಂಗಳೂರು

ಮನುಷ್ಯ ಪ್ರಜ್ಞೆ ಕುರಿತು ತಮ್ಮ ಸಂಶೋಧನೆಗಳಿಂದ ಜಗದ್ವಿಖ್ಯಾತರಾದ ನ್ಯೂರೋಸೈಂಟಿಸ್ಟ್ ಡಾ. ವಿನೋದ್ ಮಿಶ್ರಾ ತಮ್ಮ ಲ್ಯಾಬ್ ಆಫೀಸಿನಲ್ಲಿ ಕುಳಿತಿದ್ದರು. ಅವರ ಆಫೀಸ್ ಸಹಾಯಕಿ ಅಂಜಲಿ ಕೂಡ ಹೇಳುವುದನ್ನೆಲ್ಲಾ ಹೇಳಿಯಾದ ಮೇಲೆ ನಿಸ್ಸಹಾಯಕ ಮುಖ ಹೊತ್ತು ಕುಳಿತಳು. ಡಾ. ಮಿಶ್ರಾ ಅವಳಿಗೆ ಅಂದ್ರೆ, ನೀನೂ ಈಗ ಆ ಕನಸು ಕಂಡ ಬಗೆಗೇ ಹೇಳುತ್ತಿರುವಿ. ಆ ನೆರಳಿನಾಕೃತಿ...  ಅದಕ್ಕಿರುವ ಹಲವಾರು ಬಾಹುಗಳು... ವಿಶ್ವವೊಂದು ಭ್ರಮೆ ಅಂತ ಅದು ಹೇಳಿದ್ದು...

ಹೌದು ಸರ್  ಎಂದಳು.

ಮ್... ಎಂದು ಧ್ವನಿ ಹೊರಡಿಸಿ ತುಟಿಗಳನ್ನು ಬಿಗಿಹಿಡಿದು ಕುಳಿತರು ಡಾ. ಮಿಶ್ರಾ.

ಅಂಜಲಿ ಮುಂದುವರಿಸಿದಳು  ಎಲ್ಲಾ ಸುದ್ದಿ ಮಾಧ್ಯಮಗಳಲ್ಲಿ ಇದೇ ವಿಷಯ ಹರಿದಾಡುತ್ತಿದೆ ಸರ್. ಅಮೆರಿಕದಲ್ಲಿ ನಿನ್ನೆ ರಿಪೋರ್ಟ್ ಆಗಿತ್ತು. ಇಂದು ಚೀನಾ, ಜಪಾನ್, ಕೊರಿಯಾ, ಆಸ್ಟ್ರೇಲಿಯಾ ಅಷ್ಟೇ ಏಕೆ ನಮ್ಮ ಇಂಡಿಯಾದಲ್ಲೂ ಕೂಡ ಈ ಕನಸು ಕಂಡ ಬಗ್ಗೆ ವರದಿಯಾಗಿದೆ. ಸ್ವತಃ ವರದಿಗಾರರೇ ತಾವು ಕಂಡ

